**Code No. 18 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ದ್ವಿತೀಯ ಪತ್ರಿಕೆ
# (ವಿಸ್ತರಿಸುವಿಕೆ)

ಜನವರಿ / ಫೆಬ್ರವರಿ, 2020

ವೇಳೆ { ಉಕ್ತಲೇಖನ: 5 ನಿಮಿಷಗಳು
ವಿಸ್ತರಿಸುವಿಕೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು ಇಲ್ಲಿ ಖಾಲಿ ಇರುವ ಲೆಕ್ಚರರ್ ಇಂಜಿನಿಯರಿಂಗ್
$\frac{1}{4}$ ಹುದ್ದೆಗೆ ಹೈದರಾಬಾದ್ ಕರ್ನಾಟಕ/ ಪ್ರದೇಶದ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಹತೆ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಯಾವುದೇ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ
$\frac{1}{2}$ ಪಡೆದಿರಬೇಕು. ವಯೋ/ಮಿತಿ ಹದಿನೆಂಟ ರಿಂದ ಮೂವತ್ತೈದು, ದಿನಾಂಕ ನಾಲ್ಕು ನವೆಂಬರ್ ಎರಡು ಸಾವಿರದ ಹತ್ತೊಂಬತ್ತರೊಳಗೆ ಅರ್ಜಿ ಶುಲ್ಕದೊಂದಿಗೆ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿ/ಲ್ಲ. **ಮೇಲ್ಕಂಡ** $\frac{3}{4}$
**ಮಾಹಿತಿಯೊಂದಿಗೆ ಲೆಕ್ಚರರ್ ಹುದ್ದೆಗಾಗಿ ಅರ್ಜಿಯನ್ನು ತಯಾರಿಸಿ.**

(ಅಂಕಗಳು : 15)

***ಪ್ರಶ್ನೆ ಎರಡು :*** ರಾಜ್ಯದಲ್ಲಿನ ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತರ ವರದಿಯನ್ವಯ ವಿವಿಧ ಇಲಾಖೆಗಳು ತೆಗೆದುಕೊX ಳ್ಳಬಹುದಾದ 1

ಕ್ರಮಗಳ ಕುರಿತಂತೆ ಮಾನ್ಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಸಚಿವರ
ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ
ಸಮಿತಿಯ ಸಭೆಯನ್ನು ಸಚಿವ ಸಂಪುಟ ಸಭಾ
$\frac{1}{4}$ ಮಂದಿ/ರದಲ್ಲಿ ದಿನಾಂಕ ಮೂರನೇ ಡಿಸೆಂಬರ್
ಎರಡು ಸಾವಿರದ ಹತ್ತೊಂಬತ್ತರಂದು
ಮಂಗಳವಾರ ಬೆಳಿಗ್ಗೆ ಹತ್ತು ಗಂಟೆಗೆ
ಸಭೆಯನ್ನು ಏರ್ಪಡಿಸಲಾಗಿದೆ. ಸದರಿ ಸಭೆಗೆ
$\frac{1}{2}$ ಅಗತ್ಯ ದಾಖಲಾತಿಗಳೊಂ/ದಿಗೆ ತಪ್ಪದೇ
ಹಾಜರಾಗಬೇಕೆಂದು ಸಂಬಂಧಪಟ್ಟ ಇಲಾಖೆಗೆ
ಸರ್ಕಾರದ **ಮುಖ್ಯ ಕಾರ್ಯದರ್ಶಿಯವರಿಂದ**
**ಸಭಾ ಸೂಚನಾ ಪತ್ರ ತಯಾರಿಸಿ.**

(ಅಂಕಗಳು : 20)

**ಪ್ರಶ್ನೆ ಮೂರು :** ಕರ್ನಾಟಕ ಸರ್ಕಾರದ
$\frac{3}{4}$ ವತಿಯಿಂದ ಎರಡು ಸಾವಿರದ/ ಹತ್ತೊಂಬತ್ತರ
ನವೆಂಬರ್ ಹನ್ನೊಂದರಂದು ಬ್ಯಾಂಕ್ವೆಟ್
ಹಾಲ್‌ನಲ್ಲಿ ಹಜರತ್ ಟಿಪ್ಪು ಸುಲ್ತಾನ್
ಜಯಂತಿಯನ್ನು ಆಚರಿಸಲಾಗುವುದು. ಸದರಿ
ಸಮಾರಂಭದ ಮುಖ್ಯ ಅತಿಥಿಯಾಗಿ
2 ರಾಜ್ಯ ಸರ್ಕಾರದX ಮುಖ್ಯಮಂತ್ರಿಯವರು
ಆಗಮಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು
ರಾಜ್ಯ ಸರ್ಕಾರದ ನಗರಾಭಿವೃದ್ಧಿ ಮತ್ತು ಹಜ್
ಸಚಿವರು ವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ
ಬೆಂಗಳೂರೂ ನಗ/ರ ಉಸ್ತುವಾರಿ, ಗೃಹ $\frac{1}{4}$
ಸಚಿವರುಗಳು, ವಿರೋಧ ಪಕ್ಷದ ನಾಯಕರು
ಆಗಮಿಸಲಿದ್ದಾರೆ. ಕಾರ್ಯದರ್ಶಿಗಳು, ಕನ್ನಡ
ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ
ಇವರಿಂದ **ಮೇಲಿನ ವಿಷಯದಂ/ತೆ ಆಹ್ವಾನ** $\frac{1}{2}$
**ಪತ್ರಿಕೆಯನ್ನು ತಯಾರಿಸಿ.**

(ಅಂಕಗಳು : 15)

**ಪ್ರಶ್ನೆ ನಾಲ್ಕು :** ಕರ್ನಾಟಕ ಸಾಹಿತ್ಯ ಅಕಾಡೆಮಿ,
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ಇವರಿಂದ ಪಂಚಮ ಪತ್ರಿಕೆಯ ಎರಡು
ಸಂಪುಟಗಳ ಮುದ್ರಣ ಕೆಲಸಕ್ಕಾಗಿ/ $\frac{3}{4}$
ಆಫ್‌ಸೆಟ್ ಮುದ್ರಣ ಸೌಲಭ್ಯವುಳ್ಳ ಅರ್ಹ
ಮುದ್ರಣಾಲಯಗಳಿಂದ ಟೆಂಡರ್‌ಗಳನ್ನು
ನಿಗದಿತ ನಮೂನೆಯಲ್ಲಿ ಆಹ್ವಾನಿಸಲಾಗಿದೆ.
ಟೆಂಡರ್ ಇಎಂಡಿ ಮೂವತ್ತು ಸಾವಿರಗಳ
ಡಿಮ್ಯಾಂಡ್ ಡ್ರಾಫ್ಟ್‌ನ್ನು ರಿXಜಿಸ್ಟ್ರಾರ್, 3
ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರ
ಹೆಸರಿನಲ್ಲಿ ಸಲ್ಲಿಸಬೇಕು. ಅರ್ಜಿ ನಮೂನೆಗಾಗಿ
ಮೂನ್ನೂರು ರೂಪಾಯಿಗಳನ್ನು ದಿನಾಂಕ
ಹದಿನೆಂಟು ನವೆಂಬರ್‌ರಿಂದ ಹದಿನೇಳು
ಡಿಸೆಂಬರ್ ಎ/ರಡು ಸಾವಿರದ $\frac{1}{4}$

ಹತ್ತೊಂಬತ್ತರವರೆಗೆ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಹದಿನೇಳು
$\frac{1}{2}$ ಡಿಸೆಂಬರ್ ಎರಡು ಸಾವಿರದ ಹತ್ತೊಂಬ/ತ್ತು ಸಂಜೆ ಐದು ಗಂಟೆಗೆ, ದಿನಾಂಕ ಇಪ್ಪತ್ತು ಡಿಸೆಂಬರ್ ಎರಡು ಸಾವಿರದ ಹತ್ತೊಂಬತ್ತರಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಟೆಂಡರನ್ನು ತೆರೆಯಲಾಗುವುದು. ವಿವರಗಳಿಗೆ
$\frac{3}{4}$ ಅರ್ಜಿಯಲ್ಲಿನ ಸೂಚನೆ/ಗಳನ್ನು ಗಮನಿಸುವುದು ಅಥವಾ ಕಛೇರಿಯ ವೇಳೆ ಸಂಪರ್ಕಿಸತಕ್ಕದ್ದು. **ರಿಜಿಸ್ಟ್ರಾರ್ ಇವರಿಗೆ ತಲುಪುವಂತೆ ಟೆಂಡರ್‌ನ್ನು ಆಹ್ವಾನಿಸುವಂತೆ ತಯಾರಿಸಿ.**

(ಅಂಕಗಳು : 25)

**ಪ್ರಶ್ನೆ ಐದು :** ಸಿಗರೇಟು ಮತ್ತು ತಂಬಾಕು
4 ಉತ್ಪನ್ನXಗಳ ಕಾಯ್ದೆ ಎರಡು ಸಾವಿರದ ಮೂರರನ್ವಯ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗರೇಟು, ಬೀಡಿ,
ಚುಟ್ಟಾ ಮುಂತಾದವುಗಳನ್ನು ಸೇ/ದುವುದನ್ನು $\frac{1}{4}$
ಸಾರ್ವಜನಿಕ ತಿಳುವಳಿಕೆಗಾಗಿ ಆಸ್ಪತ್ರೆಗಳಲ್ಲಿ ಪ್ರಮುಖ ಕಾಣುವ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸಿದೆ ಎಂದು ದಪ್ಪ ಅಕ್ಷರಗಳಲ್ಲಿ
ಫಲಕಗಳನ್ನು ಹಾಕುವುದು. ಈ/ ನಿರ್ಬಂಧವನ್ನು $\frac{1}{2}$
ಉಲ್ಲಂಘಿಸಿದವರ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ಕೊಡತಕ್ಕದ್ದು. ಆಡಳಿತಾಧಿಕಾರಿಗಳು ಸಂಬಂಧಿಸಿದ ಸರ್ಕಾರಿ ಆಸ್ಪತ್ರೆಗಳು ಮತ್ತು
ಕಛೇರಿಗಳಲ್ಲಿ ಧೂಮಪಾನ ಮಾಡು/ವುದನ್ನು $\frac{3}{4}$
ನಿಷೇಧಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು. **ಸದರಿ ವಿಷಯವನ್ನಾಧರಿಸಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಂದ ಸುತ್ತೋಲೆ ಹೊರಡಿಸಿ.**X 5

(ಅಂಕಗಳು : 25)